ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಂದುವರೆದ ಪಾಟೀ ಸವಾಲು - ಶ್ರೀ ವಿ.ಎಸ್ ವಕೀಲರಿಂದ ಪ್ರತಿವಾದಿ ಪರ

ನಾನು ದಾವಾ ಆಸ್ತಿಯಲ್ಲಿ ಎಂದಿಗೂ ವಾಸ ಮಾಡಿಲ್ಲ ಎಂದರೆ ಸರಿಯಲ್ಲ. ಬ್ರಾಹ್ಮಣ ಕಲಸೆ ಗ್ರಾಮದಲ್ಲಿ ನಾವು ಎಂದಿಗೂ ವಾಸ ಮಾಡಿರುವುದಿಲ್ಲ. ದಾವಾ ಆಸ್ತಿಯ ವಿಸ್ತೀರ್ಣ 69 ಇಂಟು 30 ಅಡಿ ಇರುತ್ತದೆ. ಮನೆಯ ವಿಸ್ತೀರ್ಣ 55 X 28 ಅಡಿ ಇರಬಹುದು ಎಂದು ಹೇಳುವರು. ಅದು ನಮ್ಮ ತಂದೆ ಕಟ್ಟಿಸಿರುತ್ತಾರೆ. ಸದರಿ ನಿರ್ಮಾಣಕ್ಕೆ ನಾನು ಮತ್ತು ನನ್ನ ಸಹೋದರಿ ಹಣವನ್ನು ನಗದಾಗಿ ನೀಡಿರುತ್ತೇವೆ. ಅದರ ಸಂಬಂಧಪಟ್ಟಂತೆ ಲೆಕ್ಕಅಥವಾ ದಾಖಲೆ ಇರುವುದಿಲ್ಲ.

ದಾವಾ ಆಸ್ತಿಯಲ್ಲಿ ಆರ್ ಸಿಸಿ ಮನೆ ಇರುತ್ತದೆ. ಅದರಲ್ಲಿ ಎಷ್ಟು ಕೋಣೆ ಇರುತ್ತದೆ ಎಂದು ಗೊತ್ತಿಲ್ಲ. ನಾವು ಎಂದಿಗೂ ಆ ಮನೆಯಲ್ಲಿ ವಾಸ ಮಾಡದ ಕಾರಣ ಅದರಲ್ಲಿ ಎಷ್ಟು ಕೋಣೆಗೆ ಇರುತ್ತದೆ ಎಂದು ನಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ವಾಸ ಮಾಡುತ್ತಿದ್ದರು ಎನ್ನುವರು. ದಾವೆ ಹೂಡಿದ ಕಾರಣ ನನ್ನ ತಂದೆ ಮತ್ತು ಸಹೋದರರ ನಡುವೆ ಮನಸ್ತಾಪ ಇರುತ್ತದೆ. ಅವರ ನಡುವೆ ಈಗಲೂ ಸಹ ಬಾಂಧವ್ಯ ಹೊಂದಿರುತ್ತೇನೆ ಎಂದರೆ ಹೆಚ್ಚು ಇಲ್ಲ ಎಂದು ಹೇಳುವರು.

ಕರೆಂಟ್ ಬಿಲ್ ನ್ನು ಹಾಜರುಪಡಿಸಬಹುದಾ ಎಂದರೆ ಸಾಕ್ಷಿಯು ಅದು ನಮ್ಮ ತಂದೆ ಬಳಿ ಇರುತ್ತದೆ ಎನ್ನುವರು. ಮನೆಗೆ ಒಂದೇ ವಿದ್ಯುತ್ ಮೀಟರ್ ಇರುತ್ತದೆ. ನೀರಿನ ಮೀಟರ್ ಇದೆಯೋ ಇಲ್ಲವೋ ಎಂಬುದನ್ನು ನನ್ನ ತಂದಗೆ ಕೇಳಬೇಕು ಎನ್ನುವರು. ದಾವಾ ಸ್ವತ್ತಿನ ಮನೆಯ ಮುಂದೆ ಒಂದು ಬಾವಿ ಇತ್ತು ಈಗ ಏನಾಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ನನ್ನ ತಂದೆಯ ಸಹಿಯನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ಇರುವ ಸಹಿ ನಿಮ್ಮ ತಂದೆಯದಾ ಎಂದರೆ ಇಲ್ಲ ಎನ್ನುವರು ಸದರಿ ದಾಖಲೆ ಕ್ರಯದ ಕರಾರುಪತ್ರ ಆಗಿರುತ್ತದೆ. ಸುಬ್ರಮಣ್ಯ ಜೋಯಿಸ್ ನನ್ನ ತಂದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನನ್ನ ತಾಯಿಯ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಯಂತೆ 3 ನೇ ಪ್ರತಿವಾದಿ ದಾವಾ ಸ್ವತ್ತನ್ನು ನನ್ನ ತಂದೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ನನ್ನ ತಾಯಿ ಸಹ ಸಾಕ್ಷಿಗಳ ಮುಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ದಾವಾ ಆಸ್ತಿಯ ಹಕ್ಕು ಪತ್ರ ತೋರಿಸಿದ್ದು ಅದನ್ನು ಒಪ್ಪಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಕರಾರು ಪತ್ರ ದಂತೆ ನನ್ನ ತಂದೆ ಕ್ರಯದ ಹಣ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಅದರತೆ ನನ್ನ ತಂದೆ ದುರ್ಗಾಂಬಾ ಯಲ್ಲಮ್ಮ ದೇವಸ್ತಾನದಲ್ಲಿ ಒಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮೂರು ಭಾವಚಿತ್ರ ತೋರಿಸಿ ಅದರಲ್ಲಿ ಇರುವ ಮನೆ ಯಾವುದು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುವರು. ಸದರಿ ಭಾವ ಚಿತ್ರದಲ್ಲಿ ಇರುವ ಮನೆ ಕಲಸೆ ಗ್ರಾಮದಲ್ಲಿ ಇರುವ ಮೂಲ ಮನೆ ಎಂದರೆ ಸರಿಯಲ್ಲ.

ನನ್ನ ತಂದೆಯವರು 3 ನೇ ಪ್ರತಿವಾದಿಗೆ ದಾವಾಸ್ತಿಗೆ ಸಂಬಂಧಪಟ್ಟಂತೆ ಒಂದು ಸಾಮಾನ್ಯ ಅಧಿಕಾರ ಪತ್ರವನ್ನು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಅಧಿಕಾರ ಪತ್ರದಂತೆ 3 ನೇ ಪ್ರತಿವಾದಿ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ಸೃಷ್ಟಿ ಮಾಡಿಕೊಂಡು ಮಾಡಿರಬಹುದು ಎನ್ನುವರು. ಸಾಕ್ಷಿ ಅಧಿಕಾರ ಪತ್ರದಲ್ಲಿ ತನ್ನ ತಂದೆಯಭಾವ ಚಿತ್ರ ತೋರಿಸಿ ಅದು ನಿಮ್ಮ ತಂದೆಯಾ ಭಾವಚಿತ್ರ ಎಂದರೆ ಇಲ್ಲ ಎನ್ನುವರು.

ದಿನಾಂಕ 13-4-2005 ರಂದು ಅಧಿಕಾರ ಪತ್ರವನ್ನು ನನ್ನ ತಂದೆ 2 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಧಿಕಾರ ಪತ್ರದಲ್ಲಿ ನನ್ನ ತಂದೆ ಯ ಭಾವಚಿತ್ರ ಇದ್ದು, ಅದನ್ನು ನಾನು ಉದ್ದೇಶ ಪೂರ್ವಕವಾಗಿ ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಅವರ ಆದಾಯದಿಂದ ಖರೀದಿ ಮಾಡುತ್ತಾರೆ ಸಾಕ್ಷಿ ಅವರು ವಿಭಾಗವಾದ ನಂತರ ಇಲ್ಲಿಗೆ ಬಂದು ಪಡೆದುಕೊಂಡಿರುತ್ತಾರೆ ಎನ್ನುವರು. ನಮ್ಮ ತಂದೆಗೆ ವಿಭಾಗದಲ್ಲಿ ಯಾವ ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಸ್ವಯಾರ್ಜತ ಆಸ್ತಿಯಾಗಿದ್ದು, ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ನಾನು ಅದು ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೂಲ ಮನೆಯಲ್ಲಿ ಒಂದು ಕೋಣೆ , ಮನೆ ಮುಂದೆ ಸ್ವಲ್ಪ ಜಮೀನು ಇರುತ್ತದೆ. ದಾವಾ ಆಸ್ತಿಯಲ್ಲಿ ನಾವು ಎಂದಿಗೂ ಸ್ವಾಧೀನ ಹೊಂದಿರುವುದಿಲ್ಲ ಮತ್ತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ರಾಹ್ಮಣ ಕಲಸೆ ಗ್ರಾಮದ ಆಸ್ತಿಯನ್ನು ನಮ್ಮ ತಂದೆಗೆ ನೀಡಿ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿ ಅದಲು-ಬದಲಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಬ್ರಾಹ್ಮಣ ಕಲಸೆಯಲ್ಲಿನ ಸ್ವತ್ತಿನ ಅಳತೆ 200 ಅಗಲ X 50 + 60/2 ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅದರಲ್ಲಿ ಸುಮಾರ 160 ಅಡಿಕೆ ಮರ, ಮತ್ತು 30 ತೆಂಗಿನ ಮರಗಳು ಇರುತ್ತವೆ ಎಂದರೆ ಗೊತ್ತಿಲ್ಲ ಎನ್ನುವರು. ಸದರಿ ಸ್ವತ್ತು ನಮ್ಮ ತಂದೆಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ 6 ನೇ ಪ್ರತಿವಾದಿಗೆ ಸೇರಿರುತ್ತದೆ ಮತ್ತು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ಶ್ರೀನಾಥ ಮತ್ತು ಕುಟುಂಬದವರು ಮೂರು ವರುಷಗಳಿದ ಬಾಡಿಗೆಗೆ ಇರುತ್ತಾರೆ ಎಂದರೆ ಸರಿಯಲ್ಲ. ಅದರ ಸಂಬಂಧಪಟ್ಟ ಒಂದು ಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. ಇನೊಂದು ಭಾಗದಲ್ಲಿ ಜಯಶೀಲ ರವರು ಬಾಡಿಗೆಗೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಿರೇಂದ್ರ ರವರ ಮನೆಗೆ ವಿದ್ಯುತ ಮೀಟರ್ ಇದ್ದು ಈಗ 6 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಒಂದುಭಾಗದಲ್ಲಿ ವಾಸ ಮಾಡುತ್ತಿದ್ದು ಉಳಿದ ಭಾಗದಲ್ಲಿ ಬಾಡಿಗೆದಾರರು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಬರೆದುಕೊಟ್ಟ ಕರಾರು ಮತ್ತು ಅಧಿಕಾರ ಪತ್ರದಂತೆ ಉಳಿದ ಪ್ರತಿವಾದಿಗಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಿಸ್ಸೆ ಪತ್ರದಲ್ಲಿ ನನ್ನ ತಂದೆ ಪಕ್ಷಗಾರರಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕ ಇಲ್ಲದಿದ್ದರೂ ಸಹ ಅಕ್ರಮ ವಾಗಿ ಪಾಲು ಪಡದುಕೊಳ್ಳುವ ಸಲುವಾಗಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆ ಸ್ವಯಾರ್ಜಿತ ಆಸ್ತಿಯಾದ ಕಾರಣ ಅದನ್ನು 3 ನೇ ಪ್ರತಿವಾದಿಯೊಂದಿಗೆ ಅದಲು-ಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 6 ನೇ ಪ್ರತಿವಾದಿ ಮಾಲೀಕರಾಗಿರುತ್ತಾರೆ ಮತ್ತು ನನಗೆ ಯಾವುದೇ ಹಕ್ಕ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಾಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ